ಬದ್ಧ, ಯಾವುದು ಭ್ರಷ್ಟಾಚಾರದ ಅಂಚಿನಲ್ಲಿದೆ ಎಂದು ಊಹಿಸುವುದು ಕಷ್ಟವೇ ಆಗುತ್ತದೆ. ಒಂದು ಹೊಸ ಲೇಔಟಿಗೆ ನೀರಿನ ಸವಲತ್ತನ್ನು ದಳಪತ್ ಒದಗಿಸಿಕೊಡಬೇಕು. ಅದಕ್ಕೆ ಬೇಕಾದ ಕಡತ ತಯಾರಾಗಿ ನಗರ ನಿಗಮದ ಕಾರ್ಯಾಲಯದಲ್ಲಿ ಅನುಮತಿ ಕಾನೂನುಬದ್ಧವಾಗಿ ಪಡೆಯುತ್ತಾನೆ. ಕನೆಕ್ಷನ್ ಕೊಡಮಾಡಲು ಹೋದಾಗ ಅವಶ್ಯವಾದ ಜಾಗದ ಪೈಪಿನಲ್ಲಿ ನೀರಿಲ್ಲ. ಸ್ವಲ್ಪ ಆಳಕ್ಕೆ ಅಗೆದರೆ ಮುಖ್ಯವಾದ ಟ್ರಂಕ್ ಪೈಪಿದೆ. ಅದಕ್ಕೆ ಕನೆಕ್ಷನ್ ಕೊಡಲು ಅನುಮತಿಯಿಲ್ಲವಾದರೂ ಅದಕ್ಕೇ ಈ ಪೈಪನ್ನು ಸೇರಿಸುತ್ತಾರೆ. ನೀರು ಸರಬರಾಜಿನ ಅನುಮತಿಯಿದೆ. ಅದನ್ನು ಎಳೆಯುವ ಪಾಯಿಂಟು ಒಣಗಿದೆ. ಮತ್ತೆಲ್ಲಿಂದಲೋ ನೆಲದಡಿಯಲ್ಲಿ ಕನೆಕ್ಷನ್ ಹಾಕಿಸಿ ಕೆಲಸ ಮುಗಿಸಿದಾಗ – ನಿಯಮಬದ್ಧ ಯಾವುದು, ನಿಯಮೋಲ್ಲಂಘನ ಆದದ್ದು ಎಲ್ಲಿ, ಕಡೆಗೆ ಜನರಿಗೆ ಬೇಕಾದ ಅತ್ಯವಶ್ಯ ನೀರಿನ ಸರಬರಾಜು ಆಯಿತೇ ಎನ್ನುವ ಪ್ರಶ್ನೆಗಳನ್ನು ಕೇಳಿಕೊಳ್ಳುತ್ತಲೇ, ನಿಯಮೋಲ್ಲಂಘನದಲ್ಲಿಯೇ ನೈತಿಕತೆ ಇರಬಹುದು ಎನ್ನುವ ವಿಚಾರ ನಮ್ಮ ಮನಸ್ಸಿಗೆ ಬರಲಿಕ್ಕೂ ಸಾಕು.

ಕೊಳೆಗೇರಿಗಳಲ್ಲಿ ವಾಸ್ತವ್ಯವಿರುವ ಜನರ ಅಸ್ತಿತ್ವವೇ ನಿಯಮೋಲ್ಲಂಘನದಿಂದ ಪ್ರಾರಂಭವಾಗುತ್ತದೆ. ಅದನ್ನು ನಿಭಾಯಿಸುವುದು ಹೇಗೆ? ನಾವು ಇದನ್ನೆಲ್ಲ ಬಡತನ–ರಾಜಕೀಯ–ಓಟುಗಳೆಂದು ಸರಳೀಕರಿಸಿಬಿಡುತ್ತೇವೆ. ಆದರೆ, ವಿಷಯಗಳನ್ನು ಒಂದು ಗೆರೆ ಎಳೆದು ನಿಯಮಬದ್ಧ–ನಿಯಮಕ್ಕೆ ಹೊರತಾದದ್ದು; ಮಾನವೀಯತೆ ಅಥವಾ ರಾಜಕೀಯ ಲಾಭದಿಂದ ಪ್ರೇರಿತವಾದದ್ದು; ಅಧಿಕೃತ ಏಜೆಂಟು–ಅನಧಿಕೃತ ದಲ್ಲಾಳಿಗಳ ನಡುವೆ ಹಂಚಿ, ಅದಕ್ಕೊಂದು ಸ್ಪಷ್ಟ ನೈತಿಕ ಲೇಪವನ್ನು ಕೊಟ್ಟುಬಿಡುತ್ತೇವೆ. ಇದೇ ಧಾಟಿಯಲ್ಲಿ ಜೈಪುರ ಮತ್ತು ಭೋಪಾಲ್ ನಗರಗಳ ಕೊಳೆಗೇರಿಗಳಲ್ಲಿ ಅಧ್ಯಯನ ಕೈಗೊಂಡ ಆಡಮ್ ಔರ್ಬಾಕ್ ಅವರ 'ಡಿಮಾಂಡಿಂಗ್ ಡೆವಲಪ್‌ಮೆಂಟ್' ಪುಸ್ತಕವನ್ನು ಗಮನಿಸಬಹುದು. ಇಲ್ಲೂ ಕೊಳೆಗೇರಿಗಳಲ್ಲಿ ವಾಸ್ತವ್ಯವಿರುವ ಬಡವರು ತಮಗೆ ಬೇಕಾದ ಕುಡಿವ ನೀರು, ಶೌಚಾಲಯ, ಒಳಚರಂಡಿ, ರಸ್ತೆಗಳನ್ನು ಪಡೆಯಲು ಸೆಣೆಸುತ್ತಿದ್ದಾರೆ. ಆ ಕೊಳೆಗೇರಿಗಳಲ್ಲಿ ರಾಜಕೀಯ ಪಕ್ಷಗಳ ಕಾರ್ಯರ್ತರು ಕೆಲಸ ಮಾಡುತ್ತಿದ್ದಾರೆ. ಈ ಕಾರ್ಯಕರ್ತರು ಒಂದು ಮಟ್ಟದಲ್ಲಿ ರಾಜಕೀಯ ನಾಯಕರ ಭಾಷಣಗಳಿಗೆ ಬೇಕಾದ ಪ್ರೇಕ್ಷಕರನ್ನು ಒಟ್ಟುಗೂಡಿಸುವವರು. ಚುನಾವಣೆಯ ಹಿಂದಿನ ದಿನ ಮದ್ಯದ ಪ್ಯಾಕೆಟ್ಟು, ಬಿರಿಯಾನಿಯನ್ನು ಹಂಚಿದಾಗ ಅದನ್ನು ಪಡೆವ ಜನರೂ ಇವರೇ, ಹಾಗೂ ಈ ಜನರಿಗೆ ಬೇಕಾದ ಸವಲತ್ತುಗಳಿಗೆ ಪೈರವಿಗಳನ್ನು ಮಾಡುವವರೂ ಇವರೇ. ಸವಲತ್ತಿಗೆ ಮಾಡುವ ಪೈರವಿ ಮಾನವೀಯತೆಯ ಮತ್ತು ನೈತಿಕತೆಯ ನೆಲೆಯಲ್ಲಿ ಒಪ್ಪಿತವಾಗಬಹುದು ಅನ್ನಿಸಿದರೂ, ಚುನಾವಣೆಯ ಸಮಯಕ್ಕೆ ಹಂಚುವ ದುಡ್ಡು, ಆಹಾರ, ಮದ್ಯ ಮತ್ತು ಸಭೆಗಳಿಗೆ ಕರೆದೊಯ್ಯುವ ಜನರ ಗುಂಪು ಅನೈತಿಕವೇ. ಇವೆರಡನ್ನೂ ಬಿಡಿಸಿ ನೋಡಲು ಸಾಧ್ಯವೇ? ಈ ಪ್ರಶ್ನೆಗೆ ಉತ್ತರ ಸರಳವಲ್ಲ.

ಅನಧಿಕೃತ ಬಸ್ತಿಗಳಲ್ಲಿ ಕಟ್ಟಡ ಕಾರ್ಯ ಕಷ್ಟವೇ. ಅಲ್ಲಿ ವಾಸ್ತವ್ಯವಿರುವ ಜನರಿಗೆ ತಲೆಯ ಮೇಲೊಂದು ಸೂರು ಮತ್ತು ಪ್ರಕೃತಿಯ ಪ್ರಕೋಪದಿಂದ ರಕ್ಷಣೆ ಬೇಕೆನ್ನುವುದು ಮಾನವೀಯ ನೆಲೆಯಲ್ಲಿ ಒಪ್ಪಬೇಕಾದ ವಿಚಾರ. ಆದರೆ, ಅನಧಿಕೃತ ಬಸ್ತಿಯಲ್ಲಿರುವ ವಸತಿಯನ್ನು ಉತ್ತಮಗೊಳಿಸಲು ದುಡ್ಡು ಹಾಕಬೇಕೆ? ಹಾಕಲು ತಯಾರಾದರೂ ಕಟ್ಟಡ ಕೆಲಸವನ್ನು ಮಾಡಿಕೊಡುವವರು ಯಾರು? ಅಲ್ಲಿ ತಳವೂರಿ ಮನೆಯನ್ನು ಪಕ್ಕಾ ಮಾಡಿಕೊಂಡು, ಲೈಟು, ನೀರಿನ ಸರಬರಾಜು, ಒಳಚರಂಡಿಗಳ ಏರ್ಪಾಟು ಮಾಡಿಕೊಂಡರೆ ಉಚ್ಚಾಟನೆಯಾಗದ, ಅಲ್ಲೇ ಪುನರ್ವಸತಿಯಾಗುವ ಸಾಧ್ಯತೆ ಹೆಚ್ಚುತ್ತದೆ. ಅದೇ ಕಾಲಕ್ಕೆ ಆ ಮನೆಗಳ ಮೇಲೆ ಬುಲ್‌ಡೋಜರಿನ ಆಕ್ರಮಣ ಯಾವ ಕ್ಷಣದಲ್ಲೂ ಆಗಬಹುದು. ಈ ಹಿನ್ನೆಲೆಯಲ್ಲಿಯೂ ಮನೆ ಕಟ್ಟುವ ಬಂಟಿ ಸಿಂಗ್ ಇದ್ದಾನೆ. ಈ ರೀತಿಯ ಮನೆಗಳಿಗೆ ಸುಂದರ ಕಿಟಕಿ, ಚಜ್ಜಾ, ಬಾಗಿಲುಗಳನ್ನು ಜೋಡಿಸುವ ಇಮ್ರಾನ್